ಪಟ್ಟಿ ಹಿಡ್ಕೊಂಡಾಗ ನಿನ್ನ ಸಪೋರ್ಟಿಗೆ ಯಾರಾದ್ರೂ ಬೇಕು. ಇಲ್ಲಾಂದ್ರೆ ಕಣ್ಣಿನ್ ಬೇಳೆ ಯಾವ್ದು, ತಿಥಿ ವಡೆ ಯಾವ್ದು ಗೊತ್ತಾಗ್ದಂಗೆ ಹೊಡ್ದಾಕ್ತಾರೆ ಅಷ್ಟೇ' ಎಂದು ಹೆದರಿಸಿದ. ಅವನ ಬೆದರಿಕೆಗೆ ಅರೆಕ್ಷಣ ಸ್ತಬ್ಧನಾದ ತಂಬಿ ತಕ್ಷಣ ಎದ್ದು, 'ಏಯ್ ಸಕ್ರೆ ಇಲ್ದಿರೋ ಚಾ ಮಾಡೋನೇ, ನನ್ನ ಮುಟ್ಟೋ ಗಂಡ್ಸು ಈ ಭೂಮಿ ಮೇಲೆ ಯಾವನಿದಾನೋ? ಅಪ್ಪಿ ತಪ್ಪಿ ಮುಟ್ಟಿದ್ರೂ ಇಲ್ಲಿ ರೋಡಲ್ಲಿ ಹೋಗ್ತಿದಾವಲ್ಲಾ ಪ್ರೈವೇಟ್ ಬಸ್ಗಳು, ಅದೆಲ್ಲದ್ರ ಡ್ರೈವರ್, ಕ್ಲೀನರ್‌ಗಳೂ ಗೇರ್ ಲಿವರ್ ಕಿತ್ಕೊಂಡು ದಂಡೆತ್ತಿ ಬರ್ತಾರೆ ಅಷ್ಟೇ' ಎಂದು ಅಬ್ಬರಿಸಿದ. ತಕ್ಷಣವೇ ಮತ್ತೇನೋ ಹೊಳೆದಂತೆ, 'ಅಷ್ಟಕ್ಕೂ ಅವರೆಲ್ಲೂ ಯಾಕೆ ಬೇಕು? ನಮ್ಮ ಒನ್ ಮ್ಯಾನ್ ಆರ್ಮಿ ಜಬ್ಬಣ್ಣ ಇಲ್ವಾ? ಎಂತೆಂಥ ಡ್ರೈವರ್‌ಗಳ ಡೊಕ್ಕೆ ಮುರ್ದಿಲ್ಲ ಅವ್ರು! ನಂಗೆ ಹೆಲ್ಪ್ ಮಾಡಲ್ಲ ಅಂತಾರಾ? ತಲೆ.. ತಲೆಗಳನ್ನೇ ಉರುಳಿಸಿಬಿಡ್ತಾರೆ ಹಹ್ಹಾ...' ಎಂದು ಅಟ್ಟಹಾಸ ಮಾಡಿದ.

ಅದಕ್ಕೆ ತಲೆದೂಗಿದ ಉಮೇಶಿ, 'ಅದ್ಸರಿ ಅಬ್ಬೇಪಾರಿ ನನ್ಮಗನೇ, ನಿನ್ನ ಧಾರೆ ಎರೆಯೋರ‍್ಯಾರೋ?' ಎಂದು ಮತ್ತೊಂದು ಪ್ರಶ್ನೆ ಮುಂದಿಟ್ಟ. ಇದಕ್ಕೆ ಎಂದೂ ಬದಲಾಗದ ಉತ್ತರವೊಂದು ಆಗಲೇ ತಯಾರಿದೆಯೆಂಬಂತೆ ತಂಬಿ, 'ಇನ್ಯಾರು? ಎಲ್ಲ ರೋಗಕ್ಕೂ ಡಾಕ್ಟ್ರೇ ಮದ್ದು. ನನ್ನೆಲ್ಲ ಪ್ರಾಬ್ಲಮ್ಮಿಗೂ ಜಬ್ಬಣ್ಣನೇ ನೆಂಟ. ಅಷ್ಟೇ.. ಒನ್ ಲೈನ್ ಆನ್ಸರ್' ಎನ್ನುತ್ತಾ ಮತ್ತೆ ಗಹಗಹಿಸಿದ. ಅಂತೂ ಇಂತೂ ತಮ್ಮ ಮಾತು ಜಬ್ಬರ್ ನನ್ನು ಒಳಗೊಳ್ಳುತ್ತಾ ಮುಂದುವರೆಯುತ್ತಿರುವುದಕ್ಕೆ ಒಳಗೊಳಗೇ ಖುಷಿಪಟ್ಟ ಉಮೇಶಿ, 'ಅದ್ಸರಿ, ಜಬ್ಬ ನಿಂಗೆ ಮದ್ವೆ ಮಾಡೋ ಬದ್ಲು ಹುಡ್ಗೀನ ಒಳಗೆ ಕೋಣೇಲಿಟ್ಟು ನಿಕಾ ಮಾಡ್ಬಿಟ್ರೆ ಏನ್ಮಾಡ್ತಿ?' ಎಂದು ಕೇಳಿದ. ಅದಕ್ಕೆ ತಂಬಿ, 'ಏನೋ ಒಂದು ಮಾಡ್ಲಿ. ಎಲ್ಲಾದೂ ಮದ್ವೇನೇ ಅಲ್ವಾ? ಎರೆಡ್ರಲ್ಲೂ ನಾವು ಒಟ್ಟಾಗೋದೇ ಅಲ್ವಾ? ಹುಡ್ಗ-ಹುಡ್ಗೀನ ಬೇರೆ ಮಾಡಿಸೋ ಮದ್ವೆ ಯಾವ ಧರ್ಮದಲ್ಲಾದ್ರೂ ಇದ್ಯಾ ಹೇಳು' ಎಂದು ಕಟ್ಟಕಡೆಯ ಕಾಲಮ್ಮಿಗೂ ಟಿಕ್ ಹಾಕಿಯೇಬಿಟ್ಟ. ಮರುಕ್ಷಣ ತಮ್ಮೀ ತಲೆಹರಟೆಯಿಂದ ಜಬ್ಬರನ ಮುಖದಲ್ಲಿ ಕೊಂಚ ಕೊಂಚವಾಗಿ ಅರಳುತ್ತಿರುವ ಮಂದಹಾಸವನ್ನು ಗಮನಿಸಿದವನೇ ಮಾತು ಮುಂದುವರೆಸುತ್ತಾ, 'ಉಮೇಶಿ, ಅಷ್ಟಕ್ಕೂ ನನ್ ಮದುವೇಲಿ ಡ್ಯಾನ್ಸ್ ಮಾಡೋಕೆ ಜಬ್ಬಣ್ಣನತ್ರ ಒಂದು ಫೇವ್ರೆಟ್ ಸಾಂಗ್ ಇದೆ. ಯಾವ್ದು ಗೊತ್ತಾ?' ಎಂದು ಕಣ್ಣು ಹೊಡೆದ. ಉಮೇಶಿ ಯಾವ್ದು? ಎಂಬಂತೆ ನೋಡಿ, ಮರುಕ್ಷಣ ಆ ಹಾಡು ಹೊಳೆದು, 'ಓ ಗೊತ್ತಾಯ್ತು' ಎಂದವನು ತಂಬಿಯ ಸನ್ನೆ ನೋಡಿ ಎದ್ದು ನಿಂತ. ಇಬ್ಬರೂ ಕಣ್ಣಿನಲ್ಲೇ ರೆಡಿ, ಒನ್, ಟೂ, ತ್ರೀ ಹೇಳಿಕೊಂಡು ರಾಗವಾಗಿ ಹಾಡನ್ನು ಆರಂಭಿಸಿಯೇ ಬಿಟ್ಟರು.

'ಜಬ್ಬಣ್ಣ ಪೀಪಿ ಊದುವ..
ಜಬ್ಬಣ್ಣ ಡೋಲು ಬಡಿಯುವ..
ಜಬ್ಬಣ್ಣ ಹಾಡು ಹಾಡುವ..
ಜನರೆಲ್ಲ ಸೇರಿ ಕುಣಿಯುವ..
ನಲ್ಲ ತಂಬಿಯ ಮದುವೆ-
ಬಲು ಜೋರು ಜೋರು ಜೋರು...
ಬಲು ಜೋರು ಜೋರು ಜೋರು...'

ಎನ್ನುತ್ತಾ ಜಬ್ಬಣ್ಣನ ಸುತ್ತಲೂ ಕುಣಿದರು. ಕುಣಿಯುತ್ತಾ ಕುಣಿಯುತ್ತಾ ತಂಬಿ ಬಗ್ಗಿ ಜಬ್ಬರನ ಕೈ ಹಿಡಿದು ಎಳೆದುಕೊಂಡ. ಈ ಕ್ಷಣ, ಈ ಸ್ಪರ್ಶ, ಈ ಸಾಲು, ಆ ಆತ್ಮೀಯತೆಯ ನೆಪದಲ್ಲಿ ಇನ್ಯಾವುದೋ ಗತ ಕ್ಷಣವೊಂದು ಜೀವಂತವಾದಂತೆನಿಸಿ ಜಬ್ಬರನ ಮೈಯಲ್ಲಿ ವಿದ್ಯುತ್ ಸಂಚಾರವಾಯಿತು. ಹೌದು.. ಹುದ್ದೆಗಳನ್ನು ನಿರ್ವಹಿಸುವ ವ್ಯಕ್ತಿಗಳು ಬದಲಾಗುತ್ತಾರೇ ಹೊರತು ಯಾವ ಸ್ಥಾನವೂ ಖಾಲಿ ಬೀಳುವುದಿಲ್ಲ. ಅಂದು ಅರವಿಂದ, ಇಂದು ನಲ್ಲ ತಂಬಿ, ನಾಳೆ ಇನ್ಯಾರೋ... ನರ್ತಕ ಬದಲಾದ ಮೇಲೂ ಈ ಸಾಲು, ಈ ಕುಣಿತ, ಈ ಸಂಭ್ರಮ ಹೀಗೇ ಇರುತ್ತದೆ...

ಥಟ್ಟನೆ ಮೇಲೆದ್ದವನೇ ಜಬ್ಬರ್ 'ಬಲು ಜೋರು ಜೋರು ಜೋರು' ಎಂದು ತಾನೂ ಹಾಡುತ್ತಾ ಕುಣಿಯತೊಡಗಿದ. ಈ ನಡು ರಾತ್ರಿಯಲ್ಲಿ, ಶೀಟು ಮಾಡಿನ ಪುಟ್ಟ ಢಾಬಾದಲ್ಲಿ ಅಚಾನಕ್ಕಾಗಿ ಹುಟ್ಟಿಕೊಂಡ ಈ ಸಂಭ್ರಮದ ಅಲೆಯನ್ನು ಅರೆ ಕ್ಷಣದ ಮಟ್ಟಿಗೆ ಅಚ್ಚರಿಯಿಂದ ಕತ್ತೆತ್ತಿ ನೋಡಿದ ಸುತ್ತ ಕುಳಿತ ಜನ 'ಕುಡುಕ ನನ್ಮಕ್ಳು' ಎಂದು ಬೈದುಕೊಂಡು, ಬೇಗ ಬೇಗ ತಮ್ತಮ್ಮ ಪಾಲಿನ ಕಾಫಿ ಹೀರಿ, ಇನ್ನೇನು ಹೊರಡಲಿರುವ ಬಸ್ಸುಗಳತ್ತ ಲಗುಬಗೆಯಲ್ಲಿ ಓಡಿದರು.

●